ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 3, Nov-Dec 2019, 40-49
©*IIMRD*, Mysuru
IIMRD JOURNALS
www.iimrd.com

# ಆದಿಕರ್ನಾಟಕ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ

**ಡಾ. ಕೆ. ಶೈಲಜ**[1]

**ಪೀಠಿಕೆ**

ಯಾವುದೇ ಒಂದು ರಾಷ್ಟ್ರ ಅಥವಾ ಜನಾಂಗದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಜೀವನ ಸ್ಥಿರವಾಗಿರದೇ ಕಾಲದಿಂದ ಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿರುತ್ತದೆ. ಬದಲಾವಣೆ ಎಂಬುದು ನಿಸರ್ಗದ ನಿಯಮ, ಪ್ರತಿಯೊಬ್ಬ ವ್ಯಕ್ತಿ ಸಮುದಾಯ ಅಥವಾ ಜನಾಂಗ ಪುರಾತನ ಕಾಲದಿಂದಲೂ ಬದಲಾವಣೆಗೆ ಹೊಂದಿಕೊಳ್ಳುತ್ತಾ ಬಂದಿದ್ದಾನೆ. ಮಾನವ ಸಮಾಜ ಆದಿಕಾಲದಿಂದಲೂ ಅವ್ಯಾಹತವಾಗಿ ಬದಲಾಗುತ್ತಿದೆ. ಬಹಳ ಸಾಂಪ್ರದಾಯಿಕವೆಂದು ಕರೆಯಲ್ಪಡುವ ಸಮಾಜಗಳು ಮತ್ತು ಸಂಸ್ಕೃತಿಗಳು ಕೂಡ ಬದಲಾವಣೆಗೆ ಒಳಪಟ್ಟಿವೆ. ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಗಳ ಮಾದರಿಗಳಾದ ಅಂತಕ್ರಿಯೆಗಳು ಸಂಘಟನೆಗಳಲ್ಲಿನ ವ್ಯತ್ಯಾಸ ಹಾಗೂ ಮಾರ್ಪಾಟುಗಳಲ್ಲಿನ ಬದಲಾವಣೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಾಗಿವೆ. ಇಂತಹ ಬದಲಾವಣೆಗೆ ಭೌತಿಕ, ಜೈವಿಕ, ತಾಂತ್ರಿಕ, ಸಾಂಸ್ಕೃತಿಕ, ಶೈಕ್ಷಣಿಕೆ, ಕಾನೂನು, ಇನ್ನಿತರ ಅಂಶಗಳು ಒಟ್ಟಿಗೆ ಅಥವಾ ಬೇರೆ ಬೇರೆಯಾಗಿ ಪ್ರಭಾವ ಬೀರುತ್ತದೆ. (ಮಂಜುನಾಥ ಮತ್ತು ಶೈಲಜ, 2016)

ಬದಲಾಗುತ್ತಿರುವ ಸಮಾಜದಲ್ಲಿ ಪರಿಶಿಷ್ಟ ಜಾತಿ, ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳ ಜೀವನ ಸ್ಥಿತಿಗಳು ಕೂಡ ಬದಲಾಗುತ್ತಿವೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕದ ಅಸ್ಪೃಶ್ಯ ಸಮುದಾಯಗಳಲ್ಲಿ ಒಂದಾದ ಆದಿಕರ್ನಾಟಕ ಸಮುದಾಯವನ್ನು ಆಯ್ಕೆಮಾಡಿ ಕೊಳ್ಳಲಾಗಿದೆ.

ಶತಶತಮಾನಗಳಿಂದ ತುಳಿತಕ್ಕೊಳಗಾದ ಹಾಗೂ ಸಕಲ ಸವಲತ್ತುಗಳಿಂದಲೂ ವಂಚಿತವಾದ ಆದಿಕರ್ನಾಟಕ ಸಮುದಾಯದವರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಗಿದೆ. ಈ ಸಮುದಾಯವನ್ನು ಹೊಲೆಯ, ಬಲಗೈ, ಪಂಚಮ, ಅಂತ್ಯಜ, ಛಲವಾದಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. (ಹುಣಸೂರು ತಾಲ್ಲೂಕು ಗೆಜೆಟೀಯರ್, 2011) ಇವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಂಡು ಬಂದರೂ ಕೂಡ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಬೆಂಗಳೂರು, ರಾಮನಗರ, ರಾಯಚೂರು, ಗುಲ್ಬರ್ಗ ಮುಂತಾದ ಜಿಲ್ಲೆಗಳಲ್ಲಿ ಅಧಿಕವಾಗಿ ಕಂಡು ಬರುತ್ತಾರೆ. ಆದಿಕರ್ನಾಟಕ ಸಮುದಾಯದ ಒಟ್ಟು ಜನಸಂಖ್ಯೆ ರಾಜ್ಯದಲ್ಲಿ 29,20,942 ರಷ್ಟಿದ್ದು, 14,61,917 ರಷ್ಟು ಪುರುಷ ಮತ್ತು 14,59,025 ರಷ್ಟು ಮಹಿಳೆಯರು ಕಂಡು ಬರುತ್ತಾರೆ. ಅಂದರೆ ಒಟ್ಟು ಪರಿಶಿಷ್ಟ ಜಾತಿ ಜನಸಂಖ್ಯೆಯಲ್ಲಿ ಆದಿಕರ್ನಾಟಕ

[1] *ನಂ 56, ಬೆಂಡರವಾಡಿ, ಗುಂಡ್ಲುಪೇಟೆ ತಾಲೂಕು, ಚಾಮರಾಜನಗರ ಜಿಲ್ಲೆ–571126*

ಸಮುದಾಯದ ಜನಸಂಖ್ಯೆ ಶೇ.27.9 ರಷ್ಟು ಕಂಡುಬರುತ್ತದೆ. ಮೊದಲೇ ತಿಳಿಸಿದ ಹಾಗೇ ಇತರ ಹೆಸರುಗಳಿಂದ ಕರೆಯುವ ಈ ಸಮುದಾಯದ ಜನಸಂಖ್ಯೆಯನ್ನು ಒಟ್ಟಿಗೆ ಸೇರಿಸಿದರೆ (ಹೊಲೆಯ–7,92,785, ಹೊಲಾರ್–1548, ಬಲಗೈ–2,180 ಮತ್ತು ಛಲವಾದಿ, 2,19,626) ಇವರ ಜನಸಂಖ್ಯೆ ಒಟ್ಟು ಪರಿಶಿಷ್ಟ ಜಾತಿ ಜನಸಂಖ್ಯೆಯಲ್ಲಿ ಶೇ.37.6 ರಷ್ಟಾಗುತ್ತದೆ. (ಜನಗಣತಿ, 2011).

ಆದಿಕರ್ನಾಟಕ ಸಮುದಾಯದವರು ರಾಜ್ಯದ ಮೂಲನಿವಾಸಿಗಳಾಗಿದ್ದು ಕನ್ನಡ ಭಾಷೆಯನ್ನು ಮಾತನಾಡಲು ಮತ್ತು ಬರೆಯಲು ಬಳಸುತ್ತಾರೆ. ಇವರು ಮಾತನಾಡುವ ಕನ್ನಡ; ಶಿಷ್ಟ ಭಾಷೆಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಗಡಿ ಪ್ರದೇಶಗಳಲ್ಲಿ ನೆಲೆಸಿರುವವರು ಇತರರೊಂದಿಗೆ ಸಂಪರ್ಕ ಸಾಧಿಸಲು ತಮಿಳು ಮತ್ತು ಮಲೆಯಾಳಂ ಭಾಷೆಯನ್ನು ಬಳಸಿದರೂ ಕೂಡ ಇವರ ಪ್ರಮಾಣ ಅತ್ಯಂತ ಕಡಿಮೆಯಿದೆ.

ಆದಿಕರ್ನಾಟಕ ಸಮುದಾಯದವರು ಇತರರಂತಯೇ ಸಾಮಾನ್ಯವಾದ ಉಡುಪುಗಳನ್ನು ಧರಿಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಹೊಸ ಬಟ್ಟೆಯನ್ನು ಧರಿಸಿ ಅಲಂಕಾರ ಮಾಡಿಕೊಳ್ಳುತ್ತಾರೆ ಹಾಗೂ ಇತ್ತೀಚಿನ ದಿನಗಳಲ್ಲಿ ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಆದಿಕರ್ನಾಟಕ ಸಮುದಾಯದಲ್ಲಿ ಹಿಂದೆ ವಿವಿಧ ಆಭರಣಗಳನ್ನು ಧರಿಸುತ್ತಿದ್ದರು. ಈಗಲೂ ಕೂಡ ವಿಶಿಷ್ಟ ವಿನ್ಯಾಸದ ಆಭರಣಗಳನ್ನು ಧರಿಸಿದರೂ ಕೂಡ ಇವು ತಮ್ಮ ವಿನ್ಯಾಸದಲ್ಲಿ ಪರಂಪರೆಯನ್ನು ಹಾಗೂ ಪೂರ್ವ ಶೈಲಿಯನ್ನು ಕಳೆದುಕೊಂಡಿವೆ. ಈ ಸಮುದಾಯದ ಮಹಿಳೆಯರು ಅದರಲ್ಲೂ ಯುವತಿಯರು ಹಬ್ಬ, ವಿವಾಹ ಮುಂತಾದ ವಿಶೇಷ ದಿನಗಳಲ್ಲಿ ವಿಶಿಷ್ಟ ಅಲಂಕಾರ ಮಾಡಿಕೊಳ್ಳುತ್ತಾರೆ. ಬಹುತೇಕರು ಚಿನ್ನದ ಬಣ್ಣ ಲೇಪಿತ ಕೃತಕ ಹಾಗೂ ಪ್ಲಾಸ್ಟಿಕ್‌ಗಳಿಂದ ತಯಾರಿಸಿದ ಫ್ಯಾನ್ಸಿ ಆಭರಣಗಳನ್ನು ಧರಿಸುತ್ತಾರೆ. ಆದರೆ ಆರ್ಥಿಕವಾಗಿ ಸಬಲರಾಗಿರುವವರು ಚಿನ್ನದ ಆಭರಣಗಳನ್ನು ಧರಿಸುತ್ತಾರೆ.

ಆದಿಕರ್ನಾಟಕ ಸಮುದಾಯದವರು ಸಾಮಾನ್ಯ ಸಮುದಾಯದವರಂತೆ ರಾಗಿ, ಜೋಳ, ಮುಸುಕಿನ ಜೋಳ, ಗೋದಿ, ಭತ್ತವನ್ನು ಆಹಾರದಲ್ಲಿ ಯಥೆಚ್ಛವಾಗಿ ಬಳಸುತ್ತಾರೆ. ಇವರು ಮಾಂಸಹಾರಿಗಳಾಗಿದ್ದು, ಕುರಿ, ಕೋಳಿ, ದನ, ಮೇಕೆ, ಮೀನುಗಳನ್ನೊಳಗೊಂಡಂತೆ ಇತರೆ ಮಾಂಸವನ್ನು ಸೇವಿಸುತ್ತಾರೆ. ಆದರೆ ಯಥೇಚ್ಛವಾಗಿ ದನದ ಮಾಂಸವನ್ನು ಬಳಸುತ್ತಾರೆ. ನಂಜುಂಡಯ್ಯ ಮತ್ತು ಅನಂತ ಕೃಷ್ಣ ಅಯ್ಯರ್ (1961) ರವರು ತಮ್ಮ ಅಧ್ಯಯನದಲ್ಲಿ ಈ ಸಮುದಾಯದವರು ದನದ ಮಾಂಸದ ಜೊತೆಗೆ ಹಂದಿ ಮಾಂಸವನ್ನು ಬಳಸುತ್ತಾರೆ ಎಂದು ಹೇಳಿದ್ದಾರೆ. ಇದೇ ಅಂಶವನ್ನು ಮೊರಬ್ (2003) ರವರೂ ಕೂಡ ಉಲ್ಲೇಖಿಸಿದ್ದಾರೆ. ಆದರೆ ಮಂಡ್ಯ ಜಿಲ್ಲೆಯ ಸುತ್ತಮುತ್ತಲಿನ ಕೆಲವರು ಮಾತ್ರ ಹಂದಿ ಮಾಂಸವನ್ನು ಬಳಸುತ್ತಾರೆ. ಆದರೆ ಚಾಮರಾಜ ನಗರ ಮತ್ತು ಮೈಸೂರು ಜಿಲ್ಲೆಯ ಶೇ.90 ಕ್ಕೂ ಅಧಿಕ ಮಂದಿ ದನದ ಮಾಂಸವನ್ನು ತಿನ್ನುತ್ತಾರೆಯೇ ವಿನಃ ಹಂದಿ ಮಾಂಸವನ್ನು ಸೇವಿಸುವುದಿಲ್ಲ. ಈ ಸಮುದಾಯದಲ್ಲಿ ವಿದ್ಯಾವಂತರಾಗುತ್ತಿದ್ದಂತೆ ದನದ ಮಾಂಸವನ್ನು ತಿನ್ನುವುದನ್ನು ಬಿಡುತ್ತಿದ್ದಾರೆ. ಇತರ ಸಮುದಾಯದ ನಡುವೆ ವಾಸಿಸುವ ಬಹುತೇಕರು ನಗರ ಪ್ರದೇಶಗಳಲ್ಲಿ ಮೇಕೆ, ಕುರಿ ಮತ್ತು ಕೋಳಿ ಮಾಂಸವನ್ನು ಸೇವಿಸುತ್ತಾರೆ. ಆದರೆ ಗ್ರಾಮೀಣ ಪ್ರದೇಶದ ಶೇ.90ಕ್ಕೂ ಅಧಿಕ ಜನರು ದನದ ಮಾಂಸವನ್ನು ಬಳಸುತ್ತಾರೆ. ಕೆಲವು ಕುಟುಂಬಗಳಲ್ಲಿ ಮಾತ್ರ ಪ್ರತಿವಾರ ಸೇವಿಸಿದರೆ ಇನ್ನುಳಿದ

ಕುಟುಂಬಗಳಲ್ಲಿ ಹಬ್ಬ ಹರಿದಿನಗಳಲ್ಲಿ ಹಾಗೂ ಮನೆಗೆ ಯಾರಾದರೂ ನೆಂಟರು ಅಥವಾ ವಿಶೇಷವಾದ ಅಥಿತಿ ಬಂದಾಗ ಮಾತ್ರ ಮಾಂಸದ ಅಡುಗೆಯನ್ನು ಮಾಡುತ್ತಾರೆ. ಪುರುಷರಲ್ಲಿ ಧೂಮಪಾನ ಮತ್ತು ಮಧ್ಯಪಾನ ಸಾಮಾನ್ಯವಾಗಿದ್ದರೆ, ಮಹಿಳೆಯರಲ್ಲಿ ಕಡ್ಡಿಪುಡಿ, ಹೊಗೆಸೊಪ್ಪು, ಎಲೆ ಅಡಿಕೆ ಜಗಿಯುವುದು ಸಾಮಾನ್ಯವಾದುದಾಗಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಯುವಕರು ಪಾನ್‌ಪರಾಗ್, ಗುಟ್ಕ, ಸಿಗರೇಟು ಮುಂತಾದವುಗಳನ್ನು ಬಳಸುತ್ತಿರುವುದ್ದರಿಂದ ಆರೋಗ್ಯ ಸಮಸ್ಯೆಗಳಿಗೆ ಈಡಾಗುತ್ತಿದ್ದಾರೆ. ಅನಕ್ಷರಸ್ಥರಲ್ಲಿ ದುಶ್ಚಟಗಳು ಅಧಿಕ ಪ್ರಮಾಣದಲ್ಲಿರುವುದನ್ನು ಕಾಣಬಹುದಾಗಿದೆ. ಇದಲ್ಲದೇ ಇವರು ಸೇವಿಸುವ ಆಹಾರದಲ್ಲಿ ಪೋಷಕಾಂಶದ ಕೊರತೆ ಇರುವುದ್ದರಿಂದ ಮಹಿಳೆ ಮತ್ತು ಮಕ್ಕಳು ಅನಾರೋಗ್ಯದಿಂದ ಹಾಗೂ ಅಪೌಷ್ಟಿಕತೆಯಿಂದ ಬಳಲುವುದು ಕಂಡುಬರುತ್ತದೆ.

**ಕುಟುಂಬ ವ್ಯವಸ್ಥೆ**

ಆದಿಕರ್ನಾಟಕ ಸಮುದಾಯದಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಕಂಡು ಬರುತ್ತದೆ. ಈ ಸಮುದಾಯದಲ್ಲಿ ವಿಭಕ್ತ, ಅವಿಭಕ್ತ ಮತ್ತು ವಿಸ್ತೃತ ಕುಟುಂಬದ ವ್ಯವಸ್ಥೆಯನ್ನು ಕಾಣಬಹುದಾಗಿದ್ದು, ವಿಭಕ್ತ ಕುಟುಂಬಗಳು ಅತ್ಯಧಿಕವಾಗಿ ಕಂಡು ಬರುತ್ತವೆ. ಈ ಸಮುದಾಯದಲ್ಲಿ ಪುರುಷನು ಕುಟುಂಬದ ಮುಖ್ಯಸ್ಥನಾಗಿರುತ್ತಾನೆ. ಕುಟುಂಬದಲ್ಲಿನ ಯಾವುದೇ ನಿರ್ಧಾರಗಳನ್ನು ಯಜಮಾನನೇ ನಿರ್ಧರಿಸುತ್ತಾನೆ ಹಾಗೂ ಆಸ್ತಿಯ ಹಕ್ಕು ಗಂಡು ಮಕ್ಕಳಿಗಿರುತ್ತದೆ. ಪಿತ್ರಾರ್ಜಿತ ಆಸ್ತಿಯನ್ನು ಗಂಡು ಮಕ್ಕಳಿಗೆ ಸಮನಾಗಿ ಹಂಚಲಾಗುತ್ತದೆ. ಕುಟುಂಬದ ಯಜಮಾನ ಬಯಸಿದರೆ ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಪಾಲು ನೀಡಲಾಗುತ್ತದೆ. ಆದರೆ ಅವಿವಾಹಿತ ಹೆಣ್ಣು ಮಕ್ಕಳಿದ್ದರೆ ಜೀವನ ನಿರ್ವಹಣೆಗಾಗಿ ಆಸ್ತಿಯಲ್ಲಿ ಒಂದು ಭಾಗವನ್ನು ಕಡ್ಡಾಯವಾಗಿ ನೀಡಲಾಗುತ್ತದೆ. ಆಸ್ತಿಯ ಹಂಚಿಕೆಯ ಸಂದರ್ಭದಲ್ಲಿ ತಂದೆ ತಾಯಿ ಜೀವಂತವಾಗಿದ್ದರೆ ಅವರ ಜೀವನ ನಿರ್ವಹಣೆಗಾಗಿ ಅವರಿಗೂ ಒಂದು ಭಾಗ ಆಸ್ತಿಯನ್ನು ಕೊಡಬೇಕಾಗುತ್ತದೆ. ಅವರ ನಿಧನದ ನಂತರ ಯಾರು ಅವರನ್ನು ಕೊನೆಯವರೆಗೂ ಪೋಷಿಸಿಕೊಂಡಿರುತ್ತಾರೋ ಅವರಿಗೆ ಆ ಆಸ್ತಿಯನ್ನು ಅನುಭವಿಸುವ ಹಕ್ಕಿರುತ್ತದೆ. ಕೆಲವು ಸಂದರ್ಭಗಳಲ್ಲಿ ಆ ಆಸ್ತಿಯನ್ನು ಗಂಡು ಮಕ್ಕಳು ಸಮನಾಗಿ ಹಂಚಿಕೊಳ್ಳುತ್ತಾರೆ.

**ಕುಲವ್ಯವಸ್ಥೆ**

ಆದಿಕರ್ನಾಟಕ ಸಮುದಾಯದಲ್ಲಿ ಗಂಗಡಿಕಾರ, ಮೊರಸು, ದಾಸ, ಮಗ್ಗ, ಹದ್ದ ಎಂಬ ಒಳಪ್ರಭೇದಗಳ ಜೊತೆಗೆ ಅತ್ತಿಕುಲ, ಚಿನ್ನದ ಕುಲ, ಜಿಂತಾಕುಕುಲ, ಗುಡಿಕುಲ, ಗಾಣಿಗರಕುಲ, ಹುಟ್ಟಿನಕುಲ, ಹುತ್ತದಕುಲ, ಭೂಮಿಕುಲ, ಕಸ್ತೂರಿಕುಲ, ನಾಗರಕುಲ, ಹೂವಿನಕುಲ, ಹಸುಬೆಕುಲ, ಹಾರೆಕುಲ, ಹಣಕುಲ, ಹಾಗಲಕುಲ, ಸಿಡಿಲುಕುಲ, ಸೆಟ್ಟಿಕುಲ, ಕರಗುಕುಲ, ಬೆಳ್ಳಿಕುಲ ಮುಂತಾದ ಕುಲಗಳಿವೆ. ನಂಜುಂಡಯ್ಯ ಮತ್ತು ಅಯ್ಯರ್ (1961) ರವರು ತಮ್ಮ ಅಧ್ಯಯನದಲ್ಲಿ ಆದಿಕರ್ನಾಟಕ ಸಮುದಾಯದಲ್ಲಿ 76 ಕುಲಗಳನ್ನು ಗುರುತಿಸಿರುವುದಾಗಿ ಹೇಳಿದ್ದಾರೆ. ಜೊತೆಗೆ ಹನ್ನೆರಡುಬಣ್ಣ, ಹದಿನಾರು ಬಣ್ಣ, ಹದಿನೆಂಟು ಬಣ್ಣದವರೆಂದು ಹೇಳುವ ಮತ್ತೊಂದು ರೀತಿಯನ್ನು ಗುರುತಿಸಬಹುದಾಗಿದೆ.

**ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ**

ಆದಿಕರ್ನಾಟಕ ಸಮುದಾಯದವರು ಸಮಾಜದಲ್ಲಿ ಕೊನೆಯ ಸ್ಥಾನವನ್ನು ಹೊಂದಿದ್ದಾರೆ. ಮೂಲತಃ ಅಸ್ಪೃಶ್ಯರಾದ ಇವರನ್ನು ಸಮಾಜದಲ್ಲಿ ಅತ್ಯಂತ ನಿಕೃಷ್ಟವಾಗಿ ನೋಡುತ್ತಾರೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಸಮುದಾಯದವರು ವರ್ಣವ್ಯವಸ್ಥೆಯಡಿಯಲ್ಲಿ ಬಂದರೆ ಅಸ್ಪೃಶ್ಯರು ವರ್ಣವ್ಯವಸ್ಥೆಯ ಹೊರಗಿರುತ್ತಾರೆ. ಈಗಾಗಿ ಇವರನ್ನು ಪಂಚಮರು ಹಾಗೂ ಅಂತ್ಯಜರು ಎಂದು ಕರೆಯುತ್ತಾರೆ. ಹಿರಿಯರು ಕಿರಿಯರೆನ್ನದೆ ಬೇರೆ ಜಾತಿಯ ಸ್ಪೃಶ್ಯರು ಇವರನ್ನು ಏಕವಚನದಿಂದ ಹೆಸರಿಡಿದು ಕರೆಯುತ್ತಾರೆ ಆದರೆ ಮೇಲ್ವರ್ಗದವರು ಎಷ್ಟೆ ಕಿರಿಯವನಾಗಿದ್ದರೂ ಕೂಡ ಅವರನ್ನು ಅಪ್ಪ ಅವ್ವ ಅಯ್ಯ ಬುದ್ದಿ ಎಂಬ ಗೌರವ ಸಂಬೋಧನೆಯಿಂದ ಕರೆಯಬೇಕು. ಈಗಲೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಇದು ರೂಢಿಯಲ್ಲಿದೆ.

ಆದಿಕರ್ನಾಟಕ ಸಮುದಾಯದಲ್ಲಿ 'ಕುಳುವಾಡಿಕೆ' ಪದ್ಧತಿ ವಂಶಪಾರಾಂಪರ್ಯವಾಗಿ ನಡೆದುಕೊಂಡು ಬಂದಿದೆ. ಕುಳುವಾಡಿಕೆಯವರು ಊರಿನಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಪ್ರಚಾರ ಮಾಡುವುದು, ಹಾಗೂ ಕಂದಾಯ ವಸೂಲಿಗೆ ಅಧಿಕಾರಿಗಳು ಬಂದಾಗ ಅವರೊಂದಿಗೆ ಸಹಾಯಕರಾಗಿರುವುದು ಆತನ ಕರ್ತವ್ಯವಾಗಿತ್ತು. ಆದರೆ ಈಗ ಈ ಪದ್ಧತಿ ರದ್ದಾಗಿ ಇದೇ ಕುಟುಂಬದವನ್ನು ಗ್ರಾಮ ಸಹಾಯಕ ಹುದ್ದೆಗೆ ಗೌರವ ಧನದ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ. ಹಿಂದೆ ಈ ಸಮುದಾಯದವರನ್ನು ಇತರ ಸಮುದಾಯದವರು ಬೆಳಿಗ್ಗೆಯಿಂದ ರಾತ್ರಿಯವರೆಗೂ ದುಡಿಸಿಕೊಂಡು ಶೋಷಿಸುತ್ತಿದ್ದರು. ಜೀತ ಮಾಡಿ ಜೀವನ ದೂಡುತ್ತಿದ್ದ ಈ ಸಮುದಾಯದವರಿಗೆ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವಿರುತ್ತಿರಲಿಲ್ಲ. ಹಿಂದೆ ಸವರ್ಣೀಯರ ಕಾರ್ಯಕ್ರಮಗಳಿಗೆ ಕರೆಯದಿದ್ದರೂ ಹೋಗಿ ಬರುತ್ತಿದ್ದರು ಆದರೆ ಈಗ ಗೌರವಯುತವಾಗಿ ಕರೆದರೂ ಕೂಡ ಹೋಗಲು ಇಷ್ಟ ಪಡುವುದಿಲ್ಲ ಇವರಲ್ಲಿ ಸ್ವಾಭಿಮಾನ ಜಾಗೃತವಾಗುತ್ತಿದೆ.

ಸರ್ಕಾರದ ಕಟ್ಟುನಿಟ್ಟಿನ ಕ್ರಮ ಹಾಗೂ ಬದಲಾಗುತ್ತಿರುವ ಸಮಾಜದಲ್ಲಿ ಅಸ್ಪೃಶ್ಯತೆ ಆಚರಣೆ ಮೊದಲಿಗಿಂತ ತಗ್ಗಿದೆಯಾದರೂ ಅದು ಇನ್ನೂ ಜೀವಂತವಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೋರಾಟದ ಫಲವಾಗಿ ಇಂದು ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ತಕ್ಕ ಮಟ್ಟಿಗೆ ಬೆಳವಣಿಗೆಯಾಗುತ್ತಿದ್ದರೂ ಕೂಡ ಆಯಾಯ ಕ್ಷೇತ್ರಗಳಲ್ಲಿ ಆದಿಕರ್ನಾಟಕ ಸಮುದಾಯದವರ ಮೇಲಿನ ದೌರ್ಜನ್ಯಗಳೇನೂ ಕಡಿಮೆಯಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಕೂಡ ದೇವಾಲಯಗಳಿಗೆ ಪ್ರವೇಶವಿಲ್ಲ, ಊರ ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಆದಿಕರ್ನಾಟಕ ಸಮುದಾಯದವರೇ ಬೇರೆ ಮತ್ತು ಸವರ್ಣೀಯರೇ ಬೇರೆ ಪೂಜೆ ಮಾಡಿಕೊಳ್ಳಬೇಕು. ಸವರ್ಣೀಯರು ದೇವಾಲಯಗಳೊಳಗೆ ಪೂಜೆ ಮಾಡಿಸಿದರೆ ಈ ಸಮುದಾಯದವರು ದೇವಾಲಯದ ಹೊರಗೆ ಪೂಜೆ ಮಾಡಿಕೊಳ್ಳುತ್ತಾರೆ. ಕೆಲವು ದೇವಾಲಯಗಳಲ್ಲಿ ಒಟ್ಟಿಗೆ ಪೂಜೆ ಮಾಡಿದರೂ ಕೂಡ ಪೂಜೆ ಮಾಡುವ ಮೊದಲು ದಲಿತ ತರುವ ಪೂಜಾ ಸಾಮಾಗ್ರಿಗಳಿಗೆ ನೀರು ಚಿಮ್ಮಿಸಿ ನಂತರ ಪೂಜೆ ಮಾಡುತ್ತಾರೆ.

ಇವರ ಮನೆಯಲ್ಲಿ ಬೇರೆ ಯಾವುದೇ ಜಾತಿಯವರು (ಹಿಂದುಳಿದ ಜಾತಿಯವರು ಕೂಡ) ಆಹಾರ ಅಥವಾ ನೀರು ಸೇವಿಸುವುದಿಲ್ಲ. ಪರಿಶಿಷ್ಟ ವರ್ಗದ ಸಮುದಾಯದವರು ಕೂಡ ಪರಿಶಿಷ್ಟ ಜಾತಿ

ಸಮುದಾಯದವರಿಗಿಂತ ಶ್ರೇಷ್ಠವೆಂದು ಭಾವಿಸುತ್ತಾರೆ. ಅಸ್ಪೃಶ್ಯರನ್ನು ಸವರ್ಣೀಯರು ಮನೆಯೊಳಗೆ ಬಿಟ್ಟುಕೊಳ್ಳುವುದು ಕನಸಿನ ಮಾತು. ಅನಿವಾರ್ಯವಾದರೆ ಆತ ಹೋದ ಮೇಲೆ ಸ್ವಚ್ಚಗೊಳಿಸುತ್ತಾರೆ. ಆದರೆ ಸವರ್ಣೀಯರು ಕೂಡ ಆದಿಕರ್ನಾಟಕ ಸಮುದಾಯದವರ ಮನೆಯೊಳಗೆ ಬರುವುದಿಲ್ಲ ಬಂದರೆ ಮೈಲಿಗೆಯಾಗುತ್ತದೆ ಎಂದು ಭಾವಿಸುತ್ತಾರೆ.

ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದಿದ್ದರೂ ಕೂಡ ಅಂಗನವಾಡಿ ಕೇಂದ್ರಗಳಿಗೆ ದಲಿತ ಮಕ್ಕಳು ಬಂದರೆ ದಲಿತೇತರ ಮಕ್ಕಳನ್ನು ಕಳುಹಿಸುವುದಿಲ್ಲ. ಇತ್ತೀಚಿಗೆ ಸರ್ಕಾರ ಜಾರಿಗೆ ತಂದ ಬಿಸಿಯೂಟ ಯೋಜನೆಯಡಿ ಕಾರ್ಯನಿರ್ವಹಿಸುವ ದಲಿತ ಮಹಿಳೆ ಮಾಡಿದ ಅಡುಗೆಯನ್ನು ದಲಿತೇತರ ಮಕ್ಕಳು ಸೇವಿಸುವುದಿಲ್ಲ. ಅಡುಗೆಯವರು ದಲಿತೇತರರಾಗಿದ್ದರೆ, ಮಕ್ಕಳನ್ನು ಪ್ರತ್ಯೇಕವಾಗಿ ಕೂರಿಸುವ ಉದಾಹರಣೆಗಳು ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನ ನೋಡಿದ್ದೇವೆ. ಯಾವುದಾದರೂ ಸರ್ಕಾರಿ ಇಲಾಖೆಗಳಲ್ಲಿ ಅಥವಾ ಇತರೆ ಇಲಾಖೆಗಳಲ್ಲಿ ದಲಿತ ಸಮುದಾಯಕ್ಕೆ ಸೇರಿದ ವ್ಯಕ್ತಿ ಮುಖ್ಯಸ್ಥನಾಗಿದ್ದರೆ ಯಾರು ಕೂಡ ಸರಿಯಾಗಿ ಸ್ಪಂದಿಸುವುದಿಲ್ಲ ಹಾಗೂ ಕಿರುಕುಳ ನೀಡುವುದು ಇಂದಿಗೂ ನಡೆಯುತ್ತಿವೆ.

ಆದಿಕರ್ನಾಟಕ ಸಮುದಾಯದವರ ವಿವಾಹಕ್ಕೆ ಸವರ್ಣೀಯರನ್ನು ಆಹ್ವಾನಿಸಿದರೆ ಕೆಲವರು ಬರುತ್ತಾರೆ ಆದರೆ ಊಟ ಮಾಡುವುದಿಲ್ಲ. ಕೆಲವರಲ್ಲಿ ಮೇಲು ಕೀಳು ಎಂಬ ಬೇದಭಾವ ಇಲ್ಲದಿದ್ದರೂ ಕೂಡ ಅವರ ಸಮುದಾಯಕ್ಕೆ ಹೆದರುತ್ತಾನೆ.

ಇತ್ತೀಚಿನ ದಿನಗಳಲ್ಲಿ ಶಿಕ್ಷಣವಂತರಾದ ದಲಿತ ಯುವ ಪೀಳಿಗೆ ಸವರ್ಣೀಯರಿಗೆ ಮೊದಲಿನಂತೆ ತಲೆಬಾಗಿ ನಡೆಯಲು ಹಾಗೂ ಪೂರ್ವಜರಂತೆ ಅವರ ಮನೆಗಳಿಗೆ ಜೀತಕ್ಕೆ ಹೋಗಲು ಒಪ್ಪುವುದಿಲ್ಲ ಅಲ್ಲದೇ ತಾನು ಸವರ್ಣೀರಿಗಿಂತ ಏನೂ ಕಡಿಮೆಯಿಲ್ಲ ಅವರಿಗಿರುವಷ್ಟೆ ಅಧಿಕಾರ ಅಸ್ಪಶ್ಯರಿಗೂ ಇದೆ ಎಂದು ಭಾವಿಸುತ್ತಾರೆ. ಸವರ್ಣೀಯರ ದಬ್ಬಾಳಿಕೆಯನ್ನು  ಪ್ರಶ್ನಿಸುತ್ತಾರೆಯಲ್ಲದೇ ಸಂಘಟನೆಗಳನ್ನು ಕಟ್ಟಿಕೊಂಡು ತಮ್ಮಲ್ಲೆ ತಾವು ಅರಿವು ಮೂಡಿಸಿಕೊಳ್ಳುತ್ತಿರುವುದು ಕೆಲ ಸವರ್ಣೀಯರಿಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಎಲ್ಲಾ ಅಂಶಗಳಿಂದ ಸಮುದಾಯ–ಸಮುದಾಯಗಳ ನಡುವೆ ಜಾತಿ ಸಂಘರ್ಷ ನಡೆಯುವುದು ಅಲ್ಲಲ್ಲಿ ಕಂಡು ಬರುತ್ತಿದೆ ಆದರೆ ಎಲ್ಲೆಡೆ ಇದೇ ಪರಿಸ್ಥಿತಿ ಇದೇ ಎಂದು ಹೇಳಲಾಗದು.

ಆದರೆ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕೂಡ ದಲಿತರು ಉಳ್ಳವರ ವಿರೋಧವಾಗಿ ಮಾತನಾಡುವಂತಿಲ್ಲ ಮತ್ತು  ಪ್ರಶ್ನಿಸುವಂತಿಲ್ಲ ಏಕೆಂದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾದ ಅಸ್ಪೃಶ್ಯರಲ್ಲಿ ಹೆಚ್ಚಿನ ಜನರು ಜೀವನ ನಿರ್ವಹಣೆಗೆ ಕೃಷಿಕೂಲಿಯನ್ನು ಅವಲಂಬಿಸಿದ್ದು, ಕೂಲಿಗಾಗಿ ಮೇಲ್ಜಾತಿ ಸಮುದಾಯದವರ ಜಮೀನುಗಳನ್ನೆ ಅವಲಂಬಿಸಬೇಕಿದೆ. ಇವರು ಎದುರುತ್ತರ ನೀಡಿದರೆ ಇವರನ್ನು ಕೂಲಿಗೆ ಕರೆಯುವುದಿಲ್ಲ ಅಂತಹ ಸಂದರ್ಭದಲ್ಲಿ ಜೀವನ ನಿರ್ವಹಣೆಗೆ ತೊಂದರೆಯಾಗುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಒಂದು ರೀತಿಯ ಸಮಸ್ಯೆಯಾದರೆ ನಗರ ಪ್ರದೇಶದಲ್ಲಿ ಮತ್ತೊಂದು ರೀತಿಯ ಸಮಸ್ಯೆ ಅಸ್ಥಿತ್ವದಲ್ಲಿದೆ. ನಗರ ಪ್ರದೇಶದಲ್ಲಿ  ಅಸ್ಪೃಶ್ಯತಾ ಆಚರಣೆಯ ಸ್ವರೂಪ ಭಿನ್ನವಾಗಿದೆ.

ಮನೆಯನ್ನು ಬಾಡಿಗೆಗೆ ನೀಡುವಾಗ ಜಾತಿಯನ್ನ ಕೇಳುತ್ತಾರೆ. ಒಂದು ವೇಳೆ ಪರಿಶಿಷ್ಟ ಜಾತಿಯವರಾದರೆ ಅವರಿಗೆ ಮನೆ ನೀಡುವುದನ್ನು ತಿರಸ್ಕರಿಸುತ್ತಾರೆ. ಇದ್ದರಿಂದಾಗಿ ಪರಿಶಿಷ್ಟ ಜಾತಿ ಜನರು ಮನೆಯನ್ನು ಬಾಡಿಗೆಗೆ ಪಡೆಯುವಾಗ ಜಾತಿಯನ್ನು ಮರೆಮಾಚುವುದು ಅನಿವಾರ್ಯ. ಅರ್ಧಕ್ಕಿಂತಲೂ ಹೆಚ್ಚು ಪರಿಶಿಷ್ಟ ಜಾತಿ ಬಾಡಿಗೆದಾರರು ತಮ್ಮ ಜಾತಿಯನ್ನು ಪ್ರಕಟಿಸುವುದಿಲ್ಲ. ಒಂದು ಸ್ವಂತ ಮನೆಯಿದ್ದು ಆತ ಆದಿಕರ್ನಾಟಕ ಅಥವಾ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದವರು ಎಂದು ಗೊತ್ತಾದರೆ ಆತನ ಮನೆಗೆ ಯಾವ ಸವರ್ಣೀಯರು ಮನೆ ಬಾಡಿಗೆಗೆ ಬರುವುದಿಲ್ಲ. ಯಾವುದೇ ಪೂಜೆ ಪುರಸ್ಕಾರಗಳಾಗಲಿ, ಹಬ್ಬಗಳಾಗಲಿ ಅಥವ ಇತರ ಯಾವುದೇ ವಿಶೇಷ ಸಂದರ್ಭಗಳಿಗೆ ಅವರನ್ನು ಕರೆಯುವುದಿಲ್ಲ ಅಥವಾ ಅವರು ಕೂಡ ಭಾಗವಹಿಸುವುದಿಲ್ಲ. ಸ್ಥಿತಿವಂತ ಪರಿಶಿಷ್ಟ ಜಾತಿ ಜನರು ಇಂತಹ ಸಂದರ್ಭಗಳಲ್ಲಿ ಬೇರೆ ಜಾತಿಯವರು ಊಟ ಸೇವಿಸುವುದಿಲ್ಲ ಎಂಬ ಕಾರಣಕ್ಕೆ ಬ್ರಾಹ್ಮಣ ಅಥವಾ ಲಿಂಗಾಯಿತ ಸಮುದಾಯಕ್ಕೆ ಸೇರಿದ ಅಡುಗೆ ಭಟ್ಟರಿಂದ ಅಡುಗೆ ಮಾಡಿಸುತ್ತಾರೆ ಅಥವಾ ಹೋಟೆಲ್‌ನಿಂದ ಊಟದ ವ್ಯವಸ್ಥೆಯನ್ನು ಮಾಡುತ್ತಾರೆ ಆಗ ಇತರ ಮೇಲ್ಜಾತಿ ಸಮುದಾಯದವರು ಆಹಾರವನ್ನು ಸೇವಿಸುತ್ತಾರೆ. ಇವೆಲ್ಲದರ ನಡುವೆ ಜಾತಿ ವ್ಯವಸ್ಥೆ ಅಥವ ಅಸ್ಪೃಶ್ಯತಾಚಾರಣೆ ತನ್ನ ಬಿಗಿ ಹಿಡಿತವನ್ನು ಸಡಿಲಿಸಿಕೊಳ್ಳುತ್ತಿದೆ. ಸವರ್ಣೀಯರ ಮನಸ್ಸು ನಿಧಾನವಾಗಿ ತೆರೆದು ಕೊಳ್ಳುತ್ತಿದೆ.

ಆದಿಕರ್ನಾಟಕ ಸಮುದಾಯದ ಬಹುಪಾಲು ಜನರು ಇಂದಿಗೂ ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದಾರೆ. ಈ ಸಮುದಾಯದ ಅತ್ಯಂತ ಹೆಚ್ಚು ಜನರು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕ್ಷೇತ್ರವನ್ನು ಅವಲಂಬಿಸಿದ್ದಾರೆ. ಇವರಲ್ಲಿ ಅತಿಸಣ್ಣ ಹಿಡುವಳಿದಾರರು ಹಾಗೂ ಭೂ ರಹಿತರ ಪ್ರಮಾಣ ಅಧಿಕವಾಗಿರುವುದ್ದರಿಂದ ವ್ಯವಸಾಯಕ್ಕಿಂತ ಅತಿ ಹೆಚ್ಚಿನ ಜನರು ಕೃಷಿಕೂಲಿಯನ್ನು ಅವಲಂಬಿಸಿದ್ದಾರೆ. ಜಮೀನು ಹೊಂದಿರುವವರು ಕೂಡ ಬಂಡವಾಳದ ಕೊರತೆ, ಮಕ್ಕಳ ಮದುವೆ, ವಿದ್ಯಾಭ್ಯಾಸಕ್ಕಾಗಿ ಅಥವ ದುಶ್ಚಟಗಳಿಂದ ಸಾಲಗಾರರಾಗಿ ಹಣ ಹೊಂದಿಸಲಾಗದೆ ಇತರರಿಗೆ ಕಡಿಮೆ ಬೆಲೆಗೆ ತಮ್ಮ ಜಮೀನನ್ನು ಗುತ್ತಿಗೆ ಅಥವಾ ಬೋಗ್ಯಕ್ಕೆ ಕೊಟ್ಟು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಕೂಲಿಯು ಕೂಡ ವರ್ಷಪೂರ್ತಿ ದೊರೆಯುವುದಿಲ್ಲ. ಬದಲಿಗೆ ಕೆಲವು ತಿಂಗಳುಗಳು ಮಾತ್ರ ಕೆಲಸವಿರುತ್ತದೆ. ಇನ್ನುಳಿದ ಸಮಯದಲ್ಲಿ ಕೆಲವರು ಕೃಷಿ ಸಂಬಂಧಿತ ಕೆಲಸಗಳಾದ ದನಕರುಗಳನ್ನು ಹಾಗೂ ಕುರಿ, ಮೇಕೆ, ಕೋಳಿಗನ್ನು ಸಾಕಿ ಜೀವನ ಸಾಗಿಸುತ್ತಿದ್ದಾರೆ. ಈ ಸಮುದಾಯದಲ್ಲಿ ಸರ್ಕಾರಿ ಉದ್ಯೋಗದಲ್ಲಿರುವವರ ಪ್ರಮಾಣ ಕಡಿಮೆಯಿದೆ. ಇಂದಿಗೂ ಕೂಡ ಆರ್ಥಿಕ ದುಸ್ಥಿತಿಯಿಂದ ಮಕ್ಕಳನ್ನು ಶಾಲೆ ಬಿಡಿಸಿ ಕೂಲಿಗೆ ಕಳುಹಿಸುವುದು ಸಾಮಾನ್ಯವಾಗಿದೆ. ಸ್ವ ಉದ್ಯೋಗಿಗಳ ಪ್ರಮಾಣ ಅಥವಾ ಉದ್ದಿಮೆದಾರರ ಪ್ರಮಾಣ ಅತ್ಯಂತ ವಿರಳವಾಗಿದೆ. ಒಂದು ವೇಳೆ ಇವರು ವ್ಯಾಪಾರ ಮಾಡಿದರೂ ಕೂಡ ಅಸ್ಪೃಶ್ಯರೆಂಬ ಕಾರಣಕ್ಕೆ ಬೇರೆ ಸಮುದಾಯವರು ಖರೀದಿಸುವುದಿಲ್ಲ. ಬದಲಿಗೆ ಆಯಾಯ ಸಮುದಾಯದವರೇ ಖರೀದಿಸಬೇಕು. ಈ ರೀತಿಯ ಆಚರಣೆ ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿದೆ. ಇಲ್ಲಿಯೂ ಕೂಡ ಜಾತಿ ವ್ಯವಸ್ಥೆ ತನ್ನ ಪ್ರಭಾವವನ್ನು ಬೀರುತ್ತದೆ. ಇವರ ಆರ್ಥಿಕ ಸುಧಾರಣೆಗೆ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಇದ್ದರಿಂದಾಗಿ ಇವರ ಆರ್ಥಿಕ ಸ್ಥಿತಿ ತುಂಬಾ ಹಿಂದುಳಿದಿದೆ.

ಸ್ವಾತಂತ್ರ್ಯ ಬಂದು ಏಳು ದಶಕಗಳಾಗುತ್ತಿದ್ದರೂ ಕೂಡ ಆದಿಕರ್ನಾಟಕ ಸಮುದಾದದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ಅನಕ್ಷರಸ್ಥರಾಗಿದ್ದಾರೆ. ಅಕ್ಷರಸ್ಥರಲ್ಲೂ ಕೂಡ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪಡೆದವರ ಪ್ರಮಾಣ ಹೆಚ್ಚಿದೆ. ಮೈಸೂರು, ಚಾಮರಾಜನಗರ ಭಾಗಗಳಲ್ಲಿ ಅಲ್ಪ ಪ್ರಮಾಣದಲ್ಲಿ ಪದವಿ ಮತ್ತು ಸ್ನಾತ್ತಕೋತ್ತರ ಪದವಿಯನ್ನು ಪಡೆಯುತ್ತಿರುವರ ಪ್ರಮಾಣ ಆಮೆ ವೇಗದಲ್ಲಿ ಏರುತ್ತಿದೆಯಾದರೂ ಶೇ.80ಕ್ಕೂ ಹೆಚ್ಚು ಮಂದಿ ಕಲಾ ನಿಕಾಯದಲ್ಲಿ ಓದುತ್ತಿದ್ದಾರೆ. ವೈದ್ಯಕೀಯ, ತಾಂತ್ರಿಕ, ಮತ್ತೀತರ ವೃತ್ತಿಪರ ಕ್ಷೇತ್ರದಲ್ಲಿ ಇವರ ಪ್ರಮಾಣ ನಗಣ್ಯವಾಗಿದೆ. ನಗರ ಪ್ರದೇಶಗಳಿಗೆ ಹೋಲಿಸಿದಾಗ ಗ್ರಾಮೀಣ ಪ್ರದೇಶದಲ್ಲಿ ಹಾಗೂ ಪುರುಷರಿಗೆ ಹೋಲಿಸಿದಾಗ ಮಹಿಳೆಯರಲ್ಲಿ ಸಾಕ್ಷರತ ಪ್ರಮಾಣ ಕಡಿಮೆಯಿದೆ.  ಇತ್ತೀಚಿಗೆ ಈ ಸಮುದಾಯದಲ್ಲಿ ಶೈಕ್ಷಣಿಕ ಅರಿವು ಮೂಡುತ್ತಿದ್ದು ಶಾಲಾ ದಾಖಲಾತಿ ಪ್ರಮಾಣ ಕ್ರಮೇಣ ಏರುತ್ತಿದೆ.

ಆದಿಕರ್ನಾಟಕ ಸಮುದಾಯದವರಿಗೆ ಧಾರ್ಮಿಕವಾಗಿ ಉತ್ತಮವಾದ ಸ್ಥಾನಮಾನಗಳಿರಲಿಲ್ಲ. ಇವರು ಹಿಂದೂ ಧರ್ಮದವರೂ ಎಂದು ಹೇಳಿಕೊಂಡರೂ ಸಹಾ ಹಿಂದು ಧರ್ಮದಲ್ಲಿ ಇವರಿಗೆ ಸಮಾನವಾದ ಅವಕಾಶವಿಲ್ಲ. ಹಿಂದೂ ಧರ್ಮದ ಕೆಲವು ಅಂಶಗಳು ಈ ಸಮುದಾಯವನ್ನೊಳಗೊಂಡಂತೆ ಎಲ್ಲಾ ಬ್ರಾಹ್ಮಣೇತರ ಸಮುದಾಯದವರಿಗೆ ಮತ್ತು ಹಿಂದುಳಿದ ಸಮುದಾಯದವರಿಗೆ ಸಮಾನ ಅವಕಾಶವನ್ನು ಕಲ್ಪಿಸಿಲ್ಲದಿರುವುದನ್ನು ಕಾಣಬಹುದಾಗಿದೆ.

ಆದಿಕರ್ನಾಟಕ ಸಮುದಾಯದವರು ಸಾಮಾನ್ಯವಾಗಿ ವೆಂಕಟರಮಣಸ್ವಾಮಿ, ಬಿಳಿಗಿರಿ ರಂಗಸ್ವಾಮಿ, ಹೆಜ್ಜೂರು ಆಂಜನೇಯ, ವಡ್ಗಲ್ ರಂಗನಾಥ ಸ್ವಾಮಿ, ಸಿದ್ದಪ್ಪಾಜಿ, ಮಹದೇಶ್ವರ, ಕಪ್ಪಡಿ ರಾಚಪ್ಪಾಜಿ, ಮಂಟೆಸ್ವಾಮಿ, ಶನಿ ಮಹಾತ್ಮ, ಗೋಪಾಲಸ್ವಾಮಿ, ಭೈರವೇಶ್ವರ, ತೋಪಮ್ಮ, ಕರಿಯಮ್ಮ ತಾಯಿ, ದೊಡ್ಡಮ್ಮ ತಾಯಿ, ಹೊಸಿಲು ಮಾರಮ್ಮ, ಸಿಡಿಯಮ್ಮ, ಚಿಕ್ಕದೇವಮ್ಮ, ಲಕ್ಕಮ್ಮ, ಲಕ್ಷಿದೇವಿ, ಮುಂತಾದ ದೇವರನ್ನೊಳಗೊಂಡಂತೆ ಆಯಾಯ ಪ್ರದೇಶದಲ್ಲಿರುವ ಸ್ಥಳೀಯ ದೇವತೆಗಳನ್ನು ಪೂಜಿಸುತ್ತಾರೆ. ಸಂಕ್ರಾಂತಿ, ಯುಗಾದಿ, ದೀಪಾವಳಿ, ಗೌರಿ, ಆಯುದ ಪೂಜೆ, ಷಷ್ಠಿ, ಹಬ್ಬಗಳನ್ನೂ ಹಾಗೂ ತಮ್ಮ ಕುಲ ದೇವರ ಹಬ್ಬಗಳನ್ನು ಆಚರಿಸುತ್ತಾರೆ. ವರ್ಷಕ್ಕೊಮ್ಮೆ ಗ್ರಾಮದಲ್ಲಿ ನಡೆಯುವ ಗ್ರಾಮದೇವತೆ ಹಬ್ಬಗಳನ್ನು ಆಚರಿಸುತ್ತಾರೆ. ಇದರಲ್ಲಿ ಸಿಡಿಯಮ್ಮ, ಮಾರಮ್ಮ, ಕರಿಯಮ್ಮ, ವಾಣಿಯಮ್ಮ ಹಬ್ಬಗಳು ಪ್ರಮುಖವಾಗಿವೆ. ಇತ್ತೀಚಿನ ದಿನಗಳಲ್ಲಿ ಕೆಲವರು ಕ್ರೈಸ್ತ ಮತ್ತು ಬೌದ್ಧ ಧರ್ಮಗಳಿಗೆ ಮತಾಂತರಗೊಳ್ಳುತ್ತಿದ್ದಾರೆ. ಅದರಲ್ಲೂ ವಿದ್ಯಾವಂತರಲ್ಲಿ  ಬೌದ್ಧ ಧರ್ಮದ ತತ್ವಗಳನ್ನು ಅನುಸರಿಸುವುದು ಕಂಡು ಬರುತ್ತಿದೆ.

ಈ ಸಮುದಾಯದಲ್ಲಿ ಪ್ರಮುಖವಾಗಿ ದೊಡ್ಡ ಯಜಮಾನ, ಚಿಕ್ಕ ಯಜಮಾನ ಮತ್ತು ಮುಖ್ಯಸ್ಥರಿರುತ್ತಾರೆ. ಸಮುದಾಯದೊಳಗೆ ಯಾವುದೇ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳು ನಡೆದರೂ ಇವರ ನೇತೃತ್ವದಲ್ಲಿ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲ್ಲಾಗುತ್ತದೆ. ಸಮುದಾಯದ ಕಟ್ಟು ಪಾಡುಗಳನ್ನು ಪಾಲಿಸದಿದ್ದರೆ ಅವರಿಗೆ ಶಿಕ್ಷಿಸುವ ಅಧಿಕಾರ ಯಜಮಾನರಿಗೆ ಇರುತ್ತದೆ. ಕುಟುಂಬ ಸಮಸ್ಯೆಗಳು, ಗಂಡ ಹೆಂಡಿರ ನಡುವಿನ ಜಗಳ, ಅಕ್ರಮ ಸಂಬಂಧ, ಆಸ್ತಿ ಸಂಬಂಧಿತ ವಿಷಯಗಳಿಗೆ

ಸಂಬಂಧಿಸಿದ ವಿವಾದಗಳನ್ನು ಪರಸ್ಪರ ಚರ್ಚಿಸಿ ನ್ಯಾಯ ತೀರ್ಮಾನ ಮಾಡಲಾಗುತ್ತದೆ. ಪಂಚಾಯಿತಿ ತೀರ್ಮಾನಗಳನ್ನು ಹಾಗೂ ನೀತಿ ನಿಯಮಗಳನ್ನು ಉಲ್ಲಂಘಿಸಿದರೆ ಅವರ ಕುಟಂಬವನ್ನು ಸಮುದಾಯದಿಂದ ಹೊರಗಿಡಲಾಗುತ್ತದೆ. ಆ ಕುಟುಂಬದವರು ಗ್ರಾಮದಲ್ಲಿ ನಡೆಯುವ ಯಾವುದೇ ರೀತಿಯ ಕಾರ್ಯಕ್ರಮಗಳಿಗೆ ಭಾಗವಹಿಸುವಂತಿಲ್ಲ ಹಾಗೂ ಆ ಕುಟುಂಬದವರು ಮಾಡುವ ಯಾವುದೇ ರೀತಿಯ ಶುಭ/ಅಶುಭ ಕಾರ್ಯಗಳಿಗೂ ಹಾಗೂ ಹಬ್ಬಗಳಿಗೂ ಗ್ರಾಮದವರೂ ಭಾಗವಹಸುವಂತಿಲ್ಲ. ಒಂದು ವೇಳೆ ಯಾರಾದರೂ ಭಾಗವಹಿಸಿದರೆ ಅವರನ್ನೂ ಕೂಡ ಸಮುದಾಯದಿಂದ ಹೊರಗಿಡಲಾಗುತ್ತದೆ. ಒಂದು ವೇಳೆ ಮತ್ತೆ ಅವರು ಗ್ರಾಮಕ್ಕೆ ಅಥವ ಸಮುದಾಯಕ್ಕೆ ಸೇರಬೇಕೆಂದರೆ ಮುಖಂಡರ ಮತ್ತು ಸಮುದಾಯದವರ ಸಮಕ್ಷಮ ಕ್ಷಮೆ ಕೇಳಿ ಪಂಚಾಯಿತಿ ವಿಧಿಸಿದ ದಂಡವನ್ನು ಕುಲಕ್ಕೆ ಕಟ್ಟಿ ಸೇರಿಕೊಳ್ಳಬೇಕಾಗುತ್ತದೆ.

ವ್ಯಾಜ್ಯಗಳು ಅಥವ ಸಮಸ್ಯೆಗಳು ಬೇರೆ ಬೇರೆ ಊರಿನ ಅಥವ ಬೇರೆ ಬೇರೆ ಸಮುದಾಯಗಳಿಗೆ ಸಂಬಂಧಿಸಿದ್ದಾದರೆ ಎರಡು ಕಡೆಯವರು ಕುಳಿತು ಬಗೆಹರಿಸುತ್ತಾರೆ. ಒಂದು ವೇಳೆ ಬಗೆಹರಿಯದಿದ್ದರೆ ಗಡಿ ನ್ಯಾಯಕ್ಕೆ ವರ್ಗಾವಣೆಯಾಗುತ್ತದೆ. ಅಂದರೆ 16 ಹಳ್ಳಿಯ ಯಜಮಾನರು ಮತ್ತು ಜನರು ಒಂದೆಡೆ ಸೇರಿ ಪರಸ್ಪರ ಸಮಸ್ಯೆಯನ್ನು ಬಗೆಹರಿಸುತ್ತಾರೆ. ಮೊದಲು ಸಾಂಪ್ರದಾಯಿಕ ಪಂಚಾಯಿತಿ ತುಂಬಾ ಬಲಿಷ್ಟವಾಗಿತ್ತು. ಆದರೆ ಇಂದು ಅದು ಸಡಿಲಗೊಂಡಿದೆ. ಯಾವುದೇ ಸಮಸ್ಯೆಗಳಾದರೂ ಕೂಡ ಪೊಲೀಸ್ ಠಾಣೆ ಅಥವ ನ್ಯಾಯಾಲಯದಲ್ಲಿ ಕಾನೂನಾತ್ಮಕವಾಗಿ ಬಗೆಹರಿಸಿಕೊಳ್ಳಲಾಗುತ್ತದೆ. ಆದರೆ ಇಂದಿಗೂ ಕೂಡ ಹಳ್ಳಿಗಳಲ್ಲಿ ಪಂಚಾಯಿತಿಗಳು ಅಸ್ಥಿತ್ವದಲ್ಲಿರುವುದನ್ನು ಕಾಣಬಹುದಾಗಿದೆ.

ಆದಿಕರ್ನಾಟಕ ಸಮುದಾಯದವರು ಬೇರೆ ಸಮುದಾಯಗಳಿಗೆ ಹೋಲಿಸಿದಾಗ ರಾಜಿಕೀಯವಾಗಿ ಹಿಂದುಳಿದಿದ್ದರೂ ಕೂಡ ಪರಿಶಿಷ್ಟ ಜಾತಿಯ ಇತರರಿಗೆ ಹೋಲಿಸಿದಾಗ ಒಂದೆಜ್ಜೆ ಮುಂದಿದ್ದಾರೆ. ಸಾಂವಿಧಾನಿಕ ಸವಲತ್ತುಗಳಿಂದಾಗಿ ಈ ಸಮುದಾಯದವರೂ ಕೂಡ ರಾಜಕೀಯ ಪ್ರಾತಿನಿಧ್ಯತೆ ಪಡೆದುಕೊಳ್ಳುತ್ತಿದ್ದಾರೆ. ಈ ಸಮುದಾಯವರು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿನ ಮೀಸಲು ಕ್ಷೇತ್ರಗಳಿಗೆ ಸ್ಪರ್ಧಿಸಿರುವುದನ್ನು ಕಾಣಬಹುದಾಗಿದೆ. ಆದರೆ ಮೀಸಲು ಕ್ಷೇತ್ರಗಳಲ್ಲಿ ಸ್ಪೃಶ್ಯ ಪರಿಶಿಷ್ಟಜಾತಿ ಜನರು ಹೆಚ್ಚು ಭಾಗವಹಿಸುತ್ತಿರುವುದ್ದರಿಂದ ಆದಿಕರ್ನಾಟಕದಂತಹ ಅನೇಕ ಅಸ್ಪೃಶ್ಯ ಸಮುದಾಯಗಳಿಗೆ ನ್ಯಾಯಯುತ ಸಿಗಬೇಕಾದ ಸವಲತ್ತುಗಳು ಪೂರ್ಣಪ್ರಮಾಣದಲ್ಲಿ ದೊರೆಯುತ್ತಿಲ್ಲ. ಸಾಮಾನ್ಯವಾಗಿ ರಾಜಕೀಯ ಪಕ್ಷಗಳು ತಮ್ಮ ಮಾತನ್ನು ಕೇಳುವ, ತಮ್ಮ ಕೈಗೊಂಬೆಯಾಗಿ ವರ್ತಿಸುವಂತಹ ವ್ಯಕ್ತಿಯನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸುತ್ತಾರೆ. ವಿಧಾನ ಸಭೆ, ವಿಧಾನ ಪರಿಷತ್, ಲೋಕಸಭೆ ಮತ್ತು ರಾಜ್ಯಸಭೆ ಚುನಾವಣೆಗಳಲ್ಲೂ ಕಾಣಬಹುದಾಗಿದೆ. ಆದಿಕರ್ನಾಟಕ ಸಮುದಾಯದಲ್ಲಿ ಇಂದಿಗೂ ಕೂಡ ಅನಕ್ಷರಸ್ಥರಲ್ಲಿ ರಾಜಕೀಯ ಜಾಗೃತಿ ಕಡಿಮೆಯಿದೆ. ಆದರೆ ಅಕ್ಷರಸ್ಥರಲ್ಲಿ ರಾಜಕೀಯ ಅರಿವು ಮೂಡುತ್ತಿದೆ. ಇವೆಲ್ಲದರ ನಡುವೆಯೂ ಬಿ.ರಾಚಯ್ಯ, ಬಸವಲಿಂಗಪ್ಪ, ಗಂಗಾಧರಯ್ಯ, ಮಲ್ಲಿಕಾರ್ಜುನ ಖರ್ಗೆ, ಶ್ರೀನಿವಾಸ ಪ್ರಸಾದ್, ಜಿ.ಪರಮೇಶ್ವರ್, ಮೋಟಮ್ಮ, ಬಿ.ಸೋಮಶೇಖರ್, ದ್ರುವನಾರಾಯಣ್, ಎ.ಆರ್.ಕೃಷ್ಣಮೂರ್ತಿ ಮುಂತಾದ ರಾಜಕೀಯ ನಾಯಕರು ಸಮಾಜದ ಮತ್ತು ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇವರಲ್ಲಿ ಬಿ. ಕೃಷ್ಣಪ್ಪ, ದೇವನೂರ

ಮಹಾದೇವ, ಸಿದ್ದಲಿಂಗಯ್ಯ, ಎನ್.ಮಹೇಶ್, ಕೃಷ್ಣಮೂರ್ತಿ ಮಂಡ್ಯ, ಶಿವಕುಮಾರ ಮುಂತಾದ ದಲಿತ ಹೋರಾಟಗಾರರು ಆದಿಕರ್ನಾಟಕ ಸಮುದಾಯಗಳನ್ನೊಳಗೊಂಡಂತೆ ಎಲ್ಲಾ ದಲಿತ ಮತ್ತು ಹಿಂದುಳಿದ ಸಮುದಾಯಗಳಲ್ಲಿ ಮೂಡಿಸಿದ ಜಾಗೃತಿ ಅನನ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಆದಿಕರ್ನಾಟಕ ಸಮುದಾಯದ ಯುವಕರು ದಲಿತ ಸಂಘಟನೆಗಳೊಂದಿಗೆ ಬಹುಜನ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿ ಆ ಸಮುದಾಯದಲ್ಲಿ ರಾಜಕೀಯ ಅರಿವನ್ನು ಮೂಡಿಸುತ್ತಿದ್ದಾರೆ. ಇವೆಲ್ಲದರ ನಡುವೆಯೂ ಈ ಸಮುದಾಯದವರಲ್ಲಿ ಒಗ್ಗಟ್ಟಿಲ್ಲದ ಕಾರಣ ರಾಜಕೀಯವಾಗಿ ಯಾವ ಸಿದ್ಧಾಂತವನ್ನು ಒಪಿಕೊಳ್ಳಬೇಕು ಎಂಬುದರ ಗೊಂದಲದಲ್ಲಿಯೇ ಇದ್ದಾರೆ.

ಈ ಸಮುದಾಯದವರಲ್ಲಿ ಅದರಲ್ಲೂ ಹಿರಿಯರಲ್ಲಿ ಮಧ್ಯಪಾನ, ಧೂಮಪಾನದಂತಹ ದುಶ್ಚಟಗಳು ಸಾಮಾನ್ಯವಾಗಿರುವುದ್ದರಿಂದ ಹಲವಾರು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ಸಮುದಾಯದವರಲ್ಲಿ ಆರೋಗ್ಯದ ಅರಿವು ಕಡಿಮೆಯಿರುವುದ್ದರಿಂದ ರೋಗದ ಲಕ್ಷಣಗಳನ್ನು ಗುರುತಿಸುವಲ್ಲಿ ವಿಫಲರಾಗಿ ಉಲ್ಬಣಗೊಂಡ ಮೇಲೆ ಚಿಕಿತ್ಸೆಗೆ ಹೋಗುತ್ತಾರೆ. ನಿಶ್ಯಕ್ತಿ, ಮಂಡಿನೋವು, ಕೆಮ್ಮು, ಎದೆನೋವು, ಜ್ವರ ಮುಂತಾದ ಸಾಮಾನ್ಯ ಕಾಯಿಲೆಗಳ ಜೊತೆಗೆ ಕ್ಷಯ, ಕ್ಯಾನ್ಸರ್‌ನಂತಹ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಅನಾರೋಗ್ಯಕ್ಕೊಳಗಾದಾಗ ದೇವರಿಗೆ ಹರಕೆ ಕಟ್ಟಿಕೊಳ್ಳುವುದು, ತಾಯಿತ ಕಟ್ಟಿಸಿಕೊಳ್ಳುವುದು, ತಡೆಯೊಡೆಸುವುದು ಮುಂತಾದವುಗಳನ್ನು ಮಾಡುತ್ತಾರೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಕೊಂಡರು ಕೂಡ ದೇವರ ಮೊರೆ ಹೋಗುವುದು ಇಂದಿಗೂ ರೂಢಿಯಲ್ಲಿದೆ. ಮೊದಲು ಚಿಕಿತ್ಸೆಗೆ ಗಿಡಮೂಲಿಕೆ ಜ್ಞಾನವಿರುವರಿಂದ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಆದರೆ ಇತ್ತೀಚೆಗೆ ಚಿಕಿತ್ಸೆಗಾಗಿ ಸರ್ಕಾರಿ ಮತ್ತು ಸಾರ್ವಜನಿಕ ಆಸ್ಪತ್ರೆಗಳನ್ನು ಅವಲಂಬಿಸಬೇಕಾಗಿದೆ. ಸ್ಥಿತಿವಂತರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೊಳ್ಳುತ್ತಾರೆ. ಆದರೆ ಇವರ ಪ್ರಮಾಣ ತುಂಬಾ ಕಡಿಮೆಯಿದೆ. ಬಡವರ ಆರೋಗ್ಯ ವೃದ್ಧಿಗಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ ಆದರೆ ಯಾವ–ಯಾವ ಆರೋಗ್ಯ ಯೋಜನೆಗಳಿವೆ ಎಂಬುದರ ಪೂರ್ಣಪ್ರಮಾಣದ ಅರಿವಿಲ್ಲದಿರುವುದನ್ನು ಗಮನಿಸ ಬಹುದಾಗಿದೆ.

**ಉಪಸಂಹಾರ**

ಆದಿಕರ್ನಾಟಕ ಸಮುದಾಯವು ಸಾಮಾಜಿಕವಾಗಿ ಅತ್ಯಂತ ನೋವನ್ನುಂಡಿರುವ ಸಮುದಾಯವಾಗಿದ್ದು, ಇತರ ಸಮುದಾಯಗಳಿಗೆ ಹೋಲಿಸಿದಾಗ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ದುರ್ಬಲವಾದ ವರ್ಗವಾಗಿದೆ. ಸರ್ಕಾರ ಹಾಗೂ ಸಂಘಟನೆಗಳ ಪ್ರಯತ್ನದಿಂದಾಗಿ ಶೈಕ್ಷಣಿಕ ಅರಿವು ಮೂಡುತ್ತಿದ್ದರೂ ಕೂಡ ನಿರೀಕ್ಷಿಸಿದ ಪ್ರಮಾಣದಲ್ಲಿ ಶೈಕ್ಷಣಿಕವಾಗಿ ಮುಂದುವರೆದಿಲ್ಲ. ಜಗತ್ತು ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಸಂದರ್ಭದಲ್ಲಿ ಈ ಸಮುದಾಯದವರ ಬದಲಾವಣೆ ಅನಿವಾರ್ಯವಾಗಿದೆ. ಇವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಕೇವಲ ಸರ್ಕಾರದ ಪ್ರಯತ್ನವಷ್ಟೆ ಸಾಲದು ಬದಲಿಗೆ ಸಮುದಾಯದವರ ಪ್ರಯತ್ನ ಮತ್ತು ಇತರರ ಸಹಕಾರ ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಬೈರಪ್ಪ, ಕೆ. (1996). ಭಾರತೀಯ ಸಮಾಜ. ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪೆನಿ, ಬೆಂಗಳೂರು.
- ಮಂಜುನಾಥ ಬಿ.ಆರ್ ಮತ್ತು ಶೈಲಜ ಕೆ. (2016). ಬದಲಾಗುತ್ತಿರುವ ಬೆಟ್ಟಕುರುಬರ ಬದುಕು. ಸಂಶೋಧನಾ ಮಾರ್ಗ, ಸಂ 1, ಸಂ 4, ಪ್ರಜಾವಿಕಾಸ ಸೇವಾ ಸಂಸ್ಥೆ, ಮೈಸೂರು.
- ನೀಲಯ್ಯ. (2000). ಕರ್ನಾಟಕದಲ್ಲಿ ದಲಿತರ ಸ್ಥಿತಿಗತಿ ಮತ್ತು ಸಮುದಾಯ ಸಂಘರ್ಷ. (ಸಂ) ಶ್ರೀಕಾಂತ್. ಎಸ್. ಗ್ರಾಮಾಭಿವೃದ್ಧಿ ಸ್ವಯಂ ಸೇವಾ ಸಂಘಗಳ ಒಕ್ಕೂಟ, ಬೆಂಗಳೂರು.
- ಸೋಸಲೆ, ಚಿನ್ನಸ್ವಾಮಿ. (2012). ದಲಿತರ ಬದುಕು ಮೆಲಕು. ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.
- ಶ್ಯಾಮಸುಂದರ್. (2011). ಹುಣಸೂರು ತಾಲೂಕು ಗೆಜೆಟೀಯರ್. ಕರ್ನಾಟಕ ಸರ್ಕಾರ, ಬೆಂಗಳೂರು.
- A Hand Book of Karnataka. (2015). Karnataka Gazetteer Department, Bengaluru.
- Beteille, Andre. (1965). Caste, class and changing patterns of stratification in a Tanjavar village. University of California, Berkely.
- Dharmakumar. (1965). Land and caste in South India. Cambridge University press, Cambridge.
- Epstein, Scarlet, T. (1962). Economic development and social change in south India. Manchester University press, Manchester.
- Government of India. Report on Scheduled Caste Women in Agriculture-2008. National Commission for Women, New Delhi.
- Government of India. Census report – 2011. Register General of India, New Delhi
- Morab, S.G. (2003). AdiKarnataka. In People of India, ed. K.S.Singh., AnSI, Kolkatta.
- Nanjundaiah, H.V., and Ananth Krishna Iyer. (1961). The Mysore Tribes and Caste. The Mysore University press, vo1-III.